# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.2271/2017/ಉನಿವಿ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30.12.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಶ್ರೀ ವಿ.ಪ್ರಸನ್ನ, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಮಂಗಳೂರು, ಅವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ಹೆಚ್.ಮೊಹಮದ್ ಅಲಿ, ಪುತ್ತೂರು ತಾಲ್ಲೂಕಿನ ನಿವಾಸಿ, ದಕ್ಷಿಣ ಕನ್ನಡ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ವಿ.ಪ್ರಸನ್ನ, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಮಂಗಳೂರು, (ಇನ್ನು ಮುಂದೆ "ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಮಹಮದ್ ಷರೀಫ್ ಎನ್ನುವವರು ಉಲ್ಲಾಳ ಪಟ್ಟಣದ ಪೌರಾಯುಕ್ತರಾಗಿದ್ದ ಶ್ರೀಮತಿ ರೂಪಾಶೆಟ್ಟಿಯವರ ದುರಾಢಳಿತ ಹಾಗೂ ಭಾರೀ ಅವ್ಯವಹಾರದ ಬಗ್ಗೆ ದಿ.13.6.2016ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಲಿಖಿತ ದೂರು ಸಲ್ಲಿಸಿದ್ದರು. ಸದರಿ ದೂರಿನಲ್ಲಿ ಪೌರಾಯುಕ್ತರಾಗಿದ್ದ ಶ್ರೀಮತಿ ರೂಪಾಶೆಟ್ಟಿಯವರು 2 ವರ್ಷಗಳ ಹಿಂದೆ ಮಾಡಿದ ಕಾಮಗಾರಿಗಳಿಗೆ ದಿ.15.4.2016ರಂದು ಟೆಂಡರ್ ಕರೆದು ಅಪರಾದವೆಸಗಿರುತ್ತಾರೆಂದು ಆರೋಪಿಸಿದ್ದರು. ಸದರಿ ಮಹಮದ್ ಷರೀಫ್‌ರ ದೂರಿನ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ತನಿಖೆ ನಡೆಸಲು ಅಂದಿನ ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿ ಹಾಗೂ ಕಾರ್ಯಪಾಲಕ ಅಭಿಯಂತರರಾದ ಶ್ರೀ ಶ್ರೀಧರ್ ಅವರಿಗೆ ಸೂಚಿಸಿದ್ದರು. ದಿ.6.7.2016ರಂದು ಕಾರ್ಯಪಾಲಕ ಅಭಿಯಂತರರು ಪೌರಾಯುಕ್ತರಾದ

ಶ್ರೀಮತಿ ರೂಪಾಶೆಟ್ಟಿ ಹಾಗೂ ಕಿರಿಯ ಅಭಿಯಂತರರ ವಿರುದ್ಧ ತನಿಖಾ ವರದಿಯನ್ನು ತಯಾರಿಸಿರುತ್ತಾರೆ. ಅಂದಿನ ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿಯವರು ಕಾರ್ಯಪಾಲಕ ಅಭಿಯಂತರರ ವರದಿಯ ಮೇಲೆ ಸಲ್ಲಿಸಿದ ತಮ್ಮ ವರದಿಯಲ್ಲಿ "ಉಳ್ಳಾಲ ನಗರಸಭೆಯಲ್ಲಿ ಒಟ್ಟು 52 ಕಾಮಗಾರಿಗಳನ್ನು ಪರಿಶೀಲಿಸಲಾಗಿದ್ದು, ಸದರಿ 52 ಕಾಮಗಾರಿಗಳು 2 ವರ್ಷದ ಹಿಂದೆ ಮಾಡಿದ್ದು, ಈ ಕಾಮಗಾರಿಗಳಲ್ಲಿ ಕೆಲವು ಈಗಾಗಲೇ ಕಿತ್ತುಹೋಗಿರುತ್ತದೆ. ಕರ್ನಾಟಕ ಮುನಿಸಿಪಲ್ ಕೌನ್ಸಿಲ್ ಕಾಯ್ದೆ 1964 ಕಲಂ.155, 156, 157, ಪ್ರಕಾರ ಕಾಮಗಾರಿಗಳನ್ನು ಪಾರದರ್ಶಕತೆ ನಿಯಮದ ಪ್ರಕಾರ ಆಡಳಿತಾತ್ಮಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸಿ ಸಂಬಂಧಪಟ್ಟ ಗುತ್ತಿಗದಾರರಿಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿ ನಡೆಸಬೇಕಾಗಿರುತ್ತದೆ. ಆದರೆ ಕಳೆದ 2 ವರ್ಷಗಳ ಹಿಂದೆ ನಡೆದ ಕಾಮಗಾರಿಗಳಿಗೆ ಅಕ್ರಮವಾಗಿ ಟೆಂಡರ್ ಕರೆದಿರುವುದು ದಾಖಲಾತಿ ಮತ್ತು ಸ್ಥಳ ಪರಿಶೀಲನೆಯಿಂದ ಸಾಬೀತಾಗಿದ್ದು, ಮಹಮದ್ ಷರೀಫ್‌ರವರು ನೀಡಿದ ದೂರಿನ ವಿಷಯವು ಸತ್ಯವಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಎಲ್ಲ ಕಾಮಗಾರಿಗಳು ಉಳ್ಳಾಲ ಪುರಸಭೆ ಇದ್ದ ಸಂದರ್ಭದಲ್ಲಿ ನಡೆದಿರುವುದು ಕಂಡುಬಂದಿರುತ್ತದೆ. ಅಂದಿನ ಮುಖ್ಯಾಧಿಕಾರಿ, ಹಾಲಿ ಪೌರಾಯುಕ್ತೆ ಶ್ರೀಮತಿ ರೂಪಾಶೆಟ್ಟಿ ಹಾಗೂ ಕಿರಿಯ ಅಭಿಯಂತರರ ವಿರುದ್ಧ ಶಿಸ್ತುಕ್ರಮ ಜರುಗಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು, ಇವರಿಗೆ ಪ್ರಸ್ತಾವನೆ ಸಲ್ಲಿಸುವ ಆದೇಶಕ್ಕಾಗಿ ಕಡತ ಸಂ.ಡಿಕೆಡಿಸಿ/90/ಎಂಯುಎನ್(2)/2016-17 ರ ಕಛೇರಿಯ ಟಿಪ್ಪಣಿಯ ಕಂಡಿಕೆ 3 ರಲ್ಲಿ ದಿ.11.7.2016ರಂದು ಯೋಜನಾ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ಮಾನ್ಯ ಜಿಲ್ಲಾಧಿಕಾರಿಗಳು ದಿ.11.7.2016ರಂದು ಅನುಮೋದನೆ ನೀಡಿರುತ್ತಾರೆ.

3. ಪ್ರಸ್ತುತ ಯೋಜನಾ ನಿರ್ದೇಶಕರಾದ ವಿ.ಪ್ರಸನ್ನ ಅವರು ಪೌರಾಯುಕ್ತೆ ರೂಪಾಶೆಟ್ಟಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು, ಇವರಿಗೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿ ಒಂದು ವರ್ಷ ಕಳೆದರೂ ಇಂದಿನವರೆಗೆ ಪ್ರಸ್ತಾವನೆ ಸಲ್ಲಿಸದೆ ಉಳ್ಳಾಲ ನಗರ ಸಭೆಯಲ್ಲಿ ನಡೆದಂತಹ ಗಂಭೀರ

COMPH UPLOKA MYS-2271/2017/DRE-2

ಅವ್ಯವಹಾರ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಎದುರುದಾರರು ಮಾಡಿ ಕರ್ತವ್ಯಲೋಪವೆಸಗಿರುತ್ತಾರೆ. ಆದ್ದರಿಂದ ಸದರಿಯವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ದೂರಿನಲ್ಲಿ ಕೋರಿರುತ್ತಾರೆ.

4. ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದರೆ ದಿ.20.12.2017ರಂದು ಎದುರುದಾರರು ವರದಿ ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ವರದಿಯಲ್ಲಿ ಉಳ್ಳಾಲ ನಗರಸಭೆಯ ವ್ಯಾಪ್ತಿಯಲ್ಲಿ ಕಾಮಗಾರಿ ಹಾಗೂ ಟೆಂಡರ್‌ನಲ್ಲಿ ನಡೆದಿರುವ ಅವ್ಯವಹಾರ ಹಾಗೂ ಭ್ರಷ್ಟಾಚಾರದ ಕುರಿತು ಕೈಗೊಂಡ ತನಿಖೆಯ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿಯವರು ಮಹಮದ್ ಷರೀಫ್ ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿದ ದೂರಿನ ಪ್ರತಿಯನ್ನು, ಟೆಂಡರ್ ಪ್ರಕಟಣೆಯ ಜೆರಾಕ್ಸ್ ಪ್ರತಿಯನ್ನು, ಕಾರ್ಯಪಾಲಕ ಅಭಿಯಂತರರು ಉಳ್ಳಾಲ ನಗರಸಭೆಯ ಪೌರಾಯುಕ್ತೆ ಶ್ರೀಮತಿ ರೂಪಾಶೆಟ್ಟಿ ಅವರ ದುರಾಢಳಿತ ಹಾಗೂ ಭಾರೀ ಅವ್ಯವಹಾರ ಮಾಡಿದ ಬಗ್ಗೆ ಸಲ್ಲಿಸಿದ ವರದಿಯ ಜೆರಾಕ್ಸ್ ಪ್ರತಿ ಹಾಗೂ ದಿ.12.7.2016ರಂದು ಜಿಲ್ಲಾಧಿಕಾರಿಯವರ ಕಛೇರಿಯಿಂದ ಪೌರಾಯುಕ್ತರಾದ ಶ್ರೀಮತಿ ರೂಪಾಶೆಟ್ಟಿ ಮತ್ತು ಕಿರಿಯ ಅಭಿಯಂತರಾದ ಶ್ರೀಮತಿ ರೇಣುಕ ಮತ್ತು ಶ್ರೀಧರ್ ನಾಯಕ್ ಅವರಿಂದ ಕಾರಣ ಕೇಳಿ ನೀಡಿದ ನೋಟೀಸಿನ ಪ್ರತಿಯನ್ನು ಹಾಗೂ ದಿ.9.12.2017ರಂದು ಜಿಲ್ಲಾಧಿಕಾರಿಯವರು ಪೌರಾಢಳಿತ ನಿರ್ದೇಶಕರಿಗೆ ಬರೆದ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

5. ಈ ಪ್ರಕರಣದಲ್ಲಿ ಹಾಜರುಪಡಿಸಿದ ಟೆಂಡರ್ ಪ್ರಕಟಣೆ ದಿ.15.4.2016ರಂದು ಹೊರಡಿಸಿರುವುದು ಕಂಡುಬರುತ್ತದೆ. ಅದರಲ್ಲಿ ಟೆಂಡರ್ ನಮೂನೆಗಳನ್ನು ನೀಡುವ ಕೊನೆಯ ದಿ.25.5.2016 ಎಂದು ತಿಳಿಸಿರುತ್ತದೆ. ಸದರಿ ದಾಖಲೆಯಲ್ಲಿ ಸುಮಾರು 44 ಕಾಮಗಾರಿಗಳನ್ನು ಮಾಡುವ ಕುರಿತು ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರನ್ನು ಪೌರಾಯುಕ್ತೆ ಶ್ರೀಮತಿ ರೂಪಾಶೆಟ್ಟಿ ಅವರು ಹೊರಡಿಸಿರುತ್ತಾರೆ.

6. ಶ್ರೀ ಮಹಮದ್ ಷರೀಫ್ ಅವರು ದಿ. 13.6.2016ರಂದು ಪೌರಾಯುಕ್ತೆ ಶ್ರೀಮತಿ ರೂಪಾಶೆಟ್ಟಿ ಅವರ ವಿರುದ್ಧ ದೂರು ದಾಖಲಿಸಿದ ನಂತರ ಜಿಲ್ಲಾಧಿಕಾರಿಗಳು ಅಂದಿನ

ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿ ಮತ್ತು ಕಾರ್ಯಪಾಲಕ ಇಂಜಿನಿಯರ್ ಅವರ ಮೂಲಕ ತನಿಖೆ ಮಾಡಿಸಿರುತ್ತಾರೆ. ಕಾರ್ಯಪಾಲಕ ಇಂಜಿನಿಯರ್ ಅವರ ವರದಿಯನ್ನು ದಿ.6.7.2016ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ವರದಿಯಲ್ಲಿ ಪೌರಾಯುಕ್ತೆ ಶ್ರೀಮತಿ ರೂಪಾಶೆಟ್ಟಿ ಅವರು ಕರ್ನಾಟಕ ಮುನಿಸಿಪಲ್ ಕೌನ್ಸಿಲ್ ಕಾಯ್ದೆ 1964 ಕಲಂ.155, 156, 157, ಪ್ರಕಾರ ಕಾಮಗಾರಿಗಳನ್ನು ಪಾರದರ್ಶಕತೆ ನಿಯಮದ ಪ್ರಕಾರ ಆಡಳಿತಾತ್ಮಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸಿ, ಸಂಬಂಧಪಟ್ಟ ಗುತ್ತಿಗದಾರರಿಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿ ನಡೆಸಬೇಕಾಗಿತ್ತು. ಆದರೆ 2 ವರ್ಷಗಳ ಹಿಂದೆ ನಡೆದ ಕಾಮಗಾರಿಗಳಿಗೆ ಅಕ್ರಮವಾಗಿ ಟೆಂಡರ್ ಕರೆದಿರುವುದು ದಾಖಲಾತಿ ಮತ್ತು ಸ್ಥಳ ಪರಿಶೀಲನೆಯಿಂದ ಸಾಬೀತಾಗಿದೆಯೆಂದು ತಿಳಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಪೌರಾಯುಕ್ತೆ ರೂಪಾಶೆಟ್ಟಿ ಮತ್ತು ಕಿರಿಯ ಅಭಿಯಂತರಾದ ರೇಣುಕ ಮತ್ತು ಶ್ರೀಧರ್ ಅವರಿಂದ ಕಾರಣ ಕೇಳಿ ನೋಟೀಸು ನೀಡಿರುತ್ತಾರೆ. ಸದರಿ ನೋಟೀಸಿನ ಪ್ರತಿಯನ್ನು ಸಹ ಹಾಜರುಪಡಿಸಿರುತ್ತಾರೆ. ಪೌರಾಯುಕ್ತರು ಮತ್ತು ಕಿರಿಯ ಅಭಿಯಂತರರು ಹಿಂದೆ ಆದ ಕಾಮಗಾರಿಗಳಿಗೆ ದಿ.5.4.2016ರಂದು ಟೆಂಡರ್ ಕರೆದು ಅವ್ಯವಹಾರ ಮಾಡಿರುತ್ತಾರೆಂದು ಮನಗಂಡು ನಿರ್ದೇಶಕರು, ಪೌರಾಢಳಿತ ನಿರ್ದೇಶನಾಲಯ, ಬೆಂಗಳೂರು ಅವರಿಗೆ ಜಿಲ್ಲಾಧಿಕಾರಿಗಳು ತಿಳಿಸಲು ಪ್ರಸ್ತಾವನೆ ಮಾಡಿರುತ್ತಾರೆ. ಅದರಂತೆ ಸದರಿ ಪೌರಾಯುಕ್ತೆ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶಕರು, ಪೌರಾಢಳಿತ ನಿರ್ದೇಶನಾಲಯ, ಬೆಂಗಳೂರು ಅವರಿಗೆ ಅವರಿಗೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆಯನ್ನು ದಿ.30.1.2016ರಂದು ನೀಡಿರುತ್ತಾರೆ. ಆದರೆ ಎದುರುದಾರರು ಪೌರಾಯುಕ್ತೆ, ರೂಪಾಶೆಟ್ಟಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶಕರು ಪೌರಾಢಳಿತ ನಿರ್ದೇಶನಾಲಯ, ಬೆಂಗಳೂರು ಅವರಿಗೆ ಪ್ರಸ್ತಾವನೆಯನ್ನು ದಿ.9.12.2017ರಂದು ಕಳುಹಿಸಿರುವುದಾಗಿ ತಿಳಿಸಿರುತ್ತಾರೆ. ಇದರಿಂದಾಗಿ ಎದುರುದಾರರು ಉಳ್ಳಾಲ ನಗರಸಭೆಯಲ್ಲಿ ನಡೆದಂತಹ ಗಂಭೀರ ಅವ್ಯವಹಾರ ಪ್ರಕರಣದ ಬಗ್ಗೆ ಕ್ರಮಕೈಗೊಳ್ಳಲು ವಿಳಂಬವುಂಟು ಮಾಡಿ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿ

ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ದೂರು ಸಲ್ಲಿಸಿದ ನಂತರ ಎದುರುದಾರರು ಶ್ರೀಮತಿ ರೂಪಾಶೆಟ್ಟಿ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಒಂದುವೇಳೆ ದೂರುದಾರರು ದೂರು ಸಲ್ಲಿಸದೇ ಇದ್ದರೆ ಎದುರುದಾರರು ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತಿರಲಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಅಲ್ಲದೇ, ಕರ್ನಾಟಕ ಪಾರದರ್ಶಕತೆ ಅಧಿನಿಯಮದ ಕಲಂ 5 ಮತ್ತು 23ರಡಿಯಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

> ***Sec.5:-*** *On and from the date of commencement of this Act no procurement entity shall procure goods or services except by inviting tenders for supply.*
>
> ***Sec.23:*** *Whoever contravenes the provisions of this Act, or the rules made thereunder shall be punishable with imprisonment for a term which may extend to 3 years and with fine which may extend to Rs. 5000/-.*

8. ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳು ಮತ್ತು ಎದುರುದಾರರು ಸಲ್ಲಿಸಿದ ವರದಿಯ ಪ್ರಕಾರ ಶ್ರೀಮತಿ ರೂಪಾಶೆಟ್ಟಿಯವರು ಉಳ್ಳಾಲ ನಗರದ ಪೌರಾಯುಕ್ತೆಯಾದ ಸಮಯದಲ್ಲಿ 2 ವರ್ಷಗಳ ಹಿಂದೆ ಮಾಡಿದ ಕಾಮಗಾರಿಗೆ ಸಂಬಂಧಿಸಿದಂತೆ ದಿ.15.4.2016ರಂದು ಟೆಂಡರ್ ಕರೆದು ಕರ್ನಾಟಕ ಪಾರದರ್ಶಕತೆ ಅಧಿನಿಯಮವನ್ನು ಉಲ್ಲಂಘಿಸಿ ಕರ್ತವ್ಯಲೋಪವೆಸಗಿ, ಕಲಂ.23ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿದ್ದಾಗ್ಯೂ ಕೂಡ ಎದುರುದಾರರು ಶ್ರೀಮತಿ ರೂಪಾಶೆಟ್ಟಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಅವರಿಗೆ ಪ್ರಸ್ತಾವನೆ ಕಳುಹಿಸಲು ವಿಳಂಬವುಂಟುಮಾಡಿ, ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ಆದ್ದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು **ಉಪಲೋಕಾಯುಕ್ತರಿಗೆ** ವಹಿಸಬೇಕೆಂದೂ ಕೋರಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

30/12/17.

**(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**